3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.271/2024**

ಪ್ರಾಸಾ 6

ಚಾಸಾ 10

ಹೆಸರು ಅರುಣ್ ಕುಮಾರ್

ತಂದೆಯ ಹೆಸರು ಶ್ರೀಕಂಠಾಚಾರ್

ವಯಸ್ಸು 39 ವರ್ಷ

ಉದ್ಯೋಗ ಡೆಲಿವರಿ ಬಾಯ್

ವಾಸಸ್ಥಳ ಬೆಂಗಳೂರು

ಸಾಕ್ಷಿಯನ್ನು ದಿನಾಂಕ 31.07.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು Flip Cart ನಲ್ಲಿ ಸುಮಾರು 5 ವರ್ಷಗಳಿಂದ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದೇನೆ. ಸುಮಾರು 2 – 3 ವರ್ಷಗಳ ಹಿಂದೆ ನಾನು ಬೆಂಗಳೂರಿನ ಯಜಮಾನಪ್ಪ ಲೇ ಔಟ್, 6 ನೇ ಕ್ರಾಸ್, ಕುವೆಂಪು ಶಾಲೆಯ ಹತ್ತಿರ ಒಂದು ಪಾರ್ಸಲ್ ನ್ನು ಡೆಲಿವರಿ ಮಾಡಿರುತ್ತೇನೆ. ಅದರಲ್ಲಿ ಯಾವ ವಸ್ತು ಇತ್ತು ಎಂದು ನನಗೆ ಗೊತ್ತಾಗುವುದಿಲ್ಲ. ನಮ್ಮ ಕಂಪನಿಯ H.R. ರವರು ಹೇಳಿದಂತೆ ನಾವು ಪಾರ್ಸಲ್ ಗಳನ್ನು ಡೆಲಿವರಿ ಮಾಡುತ್ತೇವೆ. ಈ ಸಂಬಂಧ ನಮ್ಮ ಕಂಪನಿಯಲ್ಲಿ ಯಾವುದೇ ದಾಖಲಾತಿಗಳನ್ನು ಇಟ್ಟುಕೊಳ್ಳುವುದಿಲ್ಲ. ಒಂದು ವರ್ಷದ ಹಿಂದೆ ಕುಣಿಗಲ್ ಪೊಲೀಸರು ನನ್ನನ್ನು ವಿಚಾರಣೆ ಮಾಡಿದರು. ಸದರಿ ವಿಳಾಸದಲ್ಲಿ ಒಬ್ಬ ಮಹಿಳೆಗೆ ನಾನು ಪಾರ್ಸಲ್ ನ್ನು ಡೆಲಿವರಿ ಮಾಡಿರುತ್ತೇನೆ.

2) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲಾತಿಯು ಸಾಕ್ಷಿ ತನಿಖಾಧಿಕಾರಿಗೆ ಬರೆದಿರುವ ಪತ್ರ ಆಗಿದ್ದು ಅದನ್ನು ನಿಪಿ.15 ಎಂದು, ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ನಿಪಿ.15 ರಲ್ಲಿ ಪೆಪ್ಪರ್ ಸ್ಪ್ರೇ ನ್ನು ಡೆಲಿವರಿ ಮಾಡಲಾಗಿದೆ ಎಂದು ಬರೆಯಲಾಗಿದೆ. ಅದನ್ನು ದಿಃ02.01.2024 ರಂದು ಡೆಲಿವರಿ ಮಾಡಿರುತ್ತೇನೆ. ನಿಪಿ.15 ರೊಂದಿಗೆ Invoice , tracking history ನ್ನು ತನಿಖಾಧಿಕಾರಿಗೆ ಸಲ್ಲಿಸಿರುತ್ತೇನೆ. ಅವುಗಳನ್ನು ನಿಪಿ.16 ಮತ್ತು 17 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.16(ಎ), ನಿಪಿ.17(ಎ) ಮತ್ತು ನಿಪಿ.17(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳ ಪ್ರಕಾರ ಪೆಪ್ಪರ್ ಸ್ಪ್ರೇ ನ್ನು ಮಾಲಾರವರಿಗೆ ನಿಪಿ.16 ರಲ್ಲಿ ನಮೂದಿಸಿರುವ ವಿಳಾಸಕ್ಕೆ ಡೆಲಿವರಿ ಮಾಡಿರುತ್ತೇನೆ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ.N.S. ವಕೀಲರಿಂದಃ**

3) ನಿಪಿ.16 ಮತ್ತು 17 ನ್ನು ಪೊಲೀಸರಿಗೆ ನೀಡುವಾಗ ನಾನು ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸರಿ. ಸದರಿ ಸಹಿಗಳನ್ನು ನಮ್ಮ ಕಂಪನಿಯ H.R. ರವರು ಹೇಳಿದ್ದರಿಂದ ಮಾಡಿರುತ್ತೇನೆ ಎಂದರೆ ಸರಿ. ನಿಪಿ.16 ಮತ್ತು 17 ನ್ನು ನಾನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿ. ಪಾರ್ಸಲ್ ನ ಒಳಗೆ ಯಾವ ವಸ್ತುಇರುತ್ತದೆ ಎಂದು ನಮಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಪಾರ್ಸಲ್ ನ್ನು ಯಾರಿಗೆ ಡೆಲಿವರಿ ಮಾಡುತ್ತಿದ್ದೇವೆಂದು ಅವರ ಹೆಸರನ್ನು ನಾವು ತಿಳಿದುಕೊಳ್ಳುವುದಿಲ್ಲ ಎಂದರೆ ಸಾಕ್ಷಿಯು ಕಸ್ಟಮರ್ ಗೆ ಕರೆ ಮಾಡಿ ಮಾಲಾ ಪಾರ್ಸಲ್ ಬಂದಿರುತ್ತದೆ ಎಂದು ನುಡಿಯುತ್ತಾರೆ. ಪಾರ್ಸಲ್ ನ ಮೇಲೆ ಇರುವ ಹೆಸರಿನವರಿಗೇ ಅಲ್ಲದೇ ಬೇರೆ ಯಾರಿಗಾದರೂ ನಾವು ಪಾರ್ಸಲ್ ನ್ನು ಡೆಲಿವರಿ ಮಾಡಬಹುದು ಎಂದರೆ ಸರಿ. ನಾನು ಪ್ರತಿದಿನ ಹಲವಾರು ಪಾರ್ಸಲ್ ನ್ನು ಡೆಲಿವರಿ ಮಾಡುವುದರಿಂದ ಯಾರಿಗೆ ಪಾರ್ಸಲ್ ನ್ನು ಕೊಟ್ಟೆ ಎಂದು ನನಗೆ ನೆನಪಿಲ್ಲ ಎಂದರೆ ಸರಿ.

**ಪಾಟೀಸವಾಲುಃ 3 ಮತ್ತು 4 ನೇ ಆರೋಪಿಗಳ ಪರ ಶ್ರೀ.G.K. ವಕೀಲರಿಂದಃ**

4) ನಾನೇ sales executive ಆಗಿರುತ್ತೇನೆ. ನಿಪಿ.15 ರಲ್ಲಿರುವ ವಿಚಾರಗಳನ್ನು ನಮ್ಮ ಮುಖ್ಯ ಕಚೇರಿಯಲ್ಲಿ ತಯಾರು ಮಾಡಿ ಅದನ್ನು ಪೊಲೀಸರು ತಂದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿಪಿ.16 ರಲ್ಲಿ instacart service Pvt. Ltd., ಹತ್ತಿರ ಸಹಿ ಮಾಡಿರುವುದು ನಮ್ಮ ಟೀಂ ಲೀಡರ್ ಪಿ.ಎನ್.ಧ್ಯಾನೇಶ್. ಪಾರ್ಸಲ್ ನ ಒಳಗೆ Invoice ಇರುತ್ತದೆ ಎಂದರೆ ಸರಿ. ಪಾರ್ಸಲ್ ನ್ನುನೋಡಿದರೆ ಅದರ ಒಳಗೆ ಯಾವ ಐಟಂ ಇರುತ್ತದೆ ಮತ್ತು ಅದರ ಬೆಲೆ ಏನೆಂದು ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ನಾನು Flip Cart ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿರುವ ಬಗ್ಗೆ ಪೊಲೀಸರು ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಪೋ.ಠಾಣೆಗೆ ಹೋದ ನಂತರ ದಾಖಲೆಗಳನ್ನು ತೋರಿಸಿ ಪೊಲೀಸರು ಮಾಲಾರವರಿಗೆ ಇಂತಹ ವಸ್ತುವನ್ನು ಡೆಲಿವರಿ ಮಾಡಿರುತ್ತೇನೆಂದು ಎಂದು ಹೇಳಿದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿ. ನಾವು ಪಾರ್ಸಲ್ ಡೆಲಿವರಿ ಮಾಡುವುದಕ್ಕಿಂತ ಮುಂಚೆ ಕಸ್ಟಮರ್ ಕಡೆಯಿಂದ OTP ನ್ನು ಪಡೆದುಕೊಳ್ಳುತ್ತೇವೆ ಎಂದರೆ ಸಾಕ್ಷಿಯು ಕೆಲವೊಂದು ವಸ್ತುಗಳಿಗೆ ತೆಗೆದುಕೊಳ್ಳುತ್ತೇವೆ , ಕೆಲವೊಂದು ವಸ್ತುಗಳಿಗೆ ತೆಗೆದುಕೂಳ್ಳುವುದಿಲ್ಲ ಎಂದು ನುಡಿಯುತ್ತಾರೆ.

5) ನಾವು ಯಾವ್ಯಾವ ಕಸ್ಟಮರ್ ಗಳಿಗೆ ಯಾವ ದಿನ ಪಾರ್ಸಲ್ ನ್ನು ಡೆಲಿವರಿ ಮಾಡುತ್ತೇವೆಂದು ಪ್ರತ್ಯೇಕವಾಗಿ ದಾಖಲಾತಿಯನ್ನು ನಿರ್ವಹಿಸಿರುವುದಿಲ್ಲ. ನಮ್ಮ ಕಚೇರಿಯಲ್ಲಿ ನಾನಲ್ಲದೇ ಇತರೆ 50 ಜನರು ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲರಿಗೂ ಯಾವ್ಯಾವ ಏರಿಯಾ ಎಂದು ನಮ್ಮ ಕಚೇರಿಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ನಾನು ಡೆಲಿವರಿ ಮಾಡಿರುವ ವಿಳಾಸದ ಏರಿಯಾ ನನಗೆ ನಿಗಧಿಪಡಿಸಿರುತ್ತಾರೆಂದು ಪೊಲೀಸರು ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ನನ್ನನ್ನು ವಿಚಾರಣೆ ಮಾಡಿದ ಪೊಲೀಸ್ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ.

ಪೊಲೀಸರು ನನ್ನ ಹೇಳಿಕೆಯನ್ನು ವೀಡಿಯೋ ಮಾಡಿಕೊಂಡಿರುತ್ತಾರೆ. ಮಾಲಾರವರಿಗೆ ನಾನು ಯಾವುದೇ ಪಾರ್ಸಲ್ ನ್ನು ನಾನು ಡೆಲಿವರಿ ಮಾಡಿಲ್ಲ ಎಂದರೆ ಸಾಕ್ಷಿಯು ಲೊಕೇಶನ್ ಗೆ ಹೋಗಿ ಡೆಲಿವರಿ ಮಾಡಿ ಬಂದಿರುತ್ತೇನೆ , ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

(2 ನೇ ಆರೋಪಿ ಪರ ವಕೀಲರು ಗೈರುಹಾಜರಾಗಿರುವುದರಿಂದ ಅವರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ